# ಕರ್ನಾಟಕ ಸರ್ಕಾರ

ಸಂಖ್ಯೆ: ಆರ್‌ಡಿ 351 ಎಲ್‌ಜಿಪಿ 2014 (ಭಾಗ 1)

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:22-03-2016

## ಅಧಿಸೂಚನೆ

ಭೂಕಬಳಿಕೆ ಎಂದು ಆಪಾದಿಸಲಾದ ಯಾವುದೇ ಕೃತ್ಯದ ಶೀಘ್ರ ವಿಚಾರಣೆಗೆ ಮತ್ತು ಕಬಳಿಸಲಾದ ಭೂಮಿಯ ಒಡೆತನ ಮತ್ತು ಕಬಳಿಸಲಾದ ಹಕ್ಕು ಸ್ವಾಮ್ಯಕ್ಕೆ ಅಥವಾ ಕಾನೂನು ಸಮ್ಮತ ಸ್ವಾಧೀನತೆಗೆ ಸಂಬಂಧಪಟ್ಟ ಮೊಕದ್ದಮೆಗಳ ಮತ್ತು ಕರ್ನಾಟಕ ಭೂಕಂದಾಯ ಅಧಿನಿಯಮ, 1964ರ XIV-ಎ ಆಧ್ಯಾಯದಲ್ಲಿ ನಿರ್ದಿಷ್ಟಪಡಿಸಲಾದಂಥ ಅಪರಾಧಗಳ ಅಧಿವಿಚಾರಣೆ ನಡೆಸುವುದಕ್ಕೆ ಒಂದು ವಿಶೇಷ ನ್ಯಾಯಾಲಯವನ್ನು ರಚಿಸಲು ಕರ್ನಾಟಕ ಭೂಕಬಳಿಕೆ ನಿಷೇಧ ಅಧಿನಿಯಮ, 2011ರ ಕಲಂ 7(1) ರಲ್ಲಿ ಅವಕಾಶ ಕಲ್ಪಿಸಲಾಗಿದೆ. ಸದರಿ ಅಧಿನಿಯಮದ ಕಲಂ 7 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರದ ಅಧಿಸೂಚನೆ ಸಂಖ್ಯೆ:ಲಾ 162 ಎಲ್‌ಸಿಇ 2014 ದಿನಾಂಕ:10-08-2015 ರಲ್ಲಿ ಸದರಿ ವಿಶೇಷ ನ್ಯಾಯಾಲಯವನ್ನು ಕೆಳಕಂಡಂತೆ ರಚಿಸಿ ಆದೇಶಿಸಲಾಗಿದೆ :-

| | | | |
|---|---|---|---|
| 1. | **ಅಧ್ಯಕ್ಷರು** | - | ಹಾಲಿ ಅಥವಾ ನಿವೃತ್ತ ಉಚ್ಚ ನ್ಯಾಯಾಲಯದ ನ್ಯಾಯಾಧೀಶರು. |
| 2. | **ನ್ಯಾಯಿಕ ಸದಸ್ಯರು** | - | ಹಾಲಿ ಅಥವಾ ನಿವೃತ್ತ ಇಬ್ಬರು ಜಿಲ್ಲಾ ನ್ಯಾಯಾಧೀಶರು. |
| 3. | **ಕಂದಾಯ ಸದಸ್ಯರು** | - | ಹಾಲಿ ಅಥವಾ ನಿವೃತ್ತ ಜಿಲ್ಲಾಧಿಕಾರಿಗಳ ದರ್ಜೆಗೆ ಕಡಿಮೆಯಿಲ್ಲದ ಇಬ್ಬರು ಅಧಿಕಾರಿಗಳು. |

ಮುಂದುವರೆದು, ಸದರಿ ವಿಶೇಷ ನ್ಯಾಯಾಲಯಕ್ಕೆ ಅಧ್ಯಕ್ಷರು, ನ್ಯಾಯಿಕ ಸದಸ್ಯರು, ಕಂದಾಯ ಸದಸ್ಯರುಗಳನ್ನು ನೇಮಿಸುವುದಕ್ಕೆ ಸಂಬಂಧಿಸಿದಂತೆ ಕಾನೂನು ಇಲಾಖೆ ಹಾಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗಳೊಡನೆ ಸಮಾಲೋಚಿಸಿ ಪರಿಶೀಲಿಸಲಾಗಿದೆ. ಕಾನೂನು ಇಲಾಖೆಯು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವನ್ನು ಸಮಾಲೋಚಿಸಿ ಸದರಿ ವಿಶೇಷ ನ್ಯಾಯಾಲಯಕ್ಕೆ ಅಧ್ಯಕ್ಷರು ಹಾಗೂ ನ್ಯಾಯಿಕ ಸದಸ್ಯರ ಹೆಸರುಗಳನ್ನು ಟಿಪ್ಪಣಿ ಸಂಖ್ಯೆ: ಲಾ 162 ಎಲ್‌ಸಿಇ 2014 ದಿನಾಂಕ:10-08-2015 ರನ್ವಯ ಸೂಚಿಸಿ ಪರಿಗಣನೆಗಾಗಿ ಕಳುಹಿಸಿದೆ. ಅದರಂತೆಯೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ಟಿಪ್ಪಣಿ ಸಂಖ್ಯೆ: ಸಿಆಸುಇ 719 ಸೇಅಸೇ 2015 ದಿನಾಂಕ:05-02-2016 ರಲ್ಲಿ ಇಬ್ಬರು ಐ.ಎ.ಎಸ್. ಅಧಿಕಾರಿಗಳ ಹೆಸರುಗಳನ್ನು ಸೂಚಿಸಿ ಕಂದಾಯ ಸದಸ್ಯರಾಗಿ ನೇಮಿಸಲು ಅನುಮೋದಿಸಿ ಕಂದಾಯ ಇಲಾಖೆಗೆ ಕಳುಹಿಸಿದೆ.

ಸದರಿ ಪ್ರಸ್ತಾವನೆಗಳನ್ನು ಪರಿಶೀಲಿಸಿ ಪ್ರಸ್ತಾಪಿತ ವಿಶೇಷ ನ್ಯಾಯಾಲಯಕ್ಕೆ ಈ ಕೆಳಕಂಡಂತೆ ಅಧ್ಯಕ್ಷರು, ನ್ಯಾಯಿಕ ಸದಸ್ಯರು ಹಾಗೂ ಕಂದಾಯ ಸದಸ್ಯರುಗಳನ್ನು ಈ ಮೂಲಕ ನೇಮಿಸಿ ಆದೇಶಿಸಿದೆ :-

| | | |
|---|---|---|
| 1 | ಜಸ್ಟೀಸ್ ಶ್ರೀ ಹೆಚ್.ಎನ್.ನಾರಾಯಣ್<br>ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರು. | ಅಧ್ಯಕ್ಷರು |
| 2 | ಶ್ರೀ ರಾಯಪ್ಪ ಹನುಮಂತಪ್ಪ ರಡ್ಡಿ<br>ನಿವೃತ್ತ ಜಿಲ್ಲಾ ನ್ಯಾಯಾಧೀಶರು. | ನ್ಯಾಯಿಕ ಸದಸ್ಯರು |
| 3 | ಶ್ರೀ ಬಾಲಕೃಷ್ಣ ಬಿ.<br>ನಿವೃತ್ತ ಜಿಲ್ಲಾ ನ್ಯಾಯಾಧೀಶರು. | ನ್ಯಾಯಿಕ ಸದಸ್ಯರು |
| 4 | ಶ್ರೀ ಮುನೀಶ್ ಮೌದ್ಗಿಲ್,ಭಾ.ಆ.ಸೇ.<br>ಆಯುಕ್ತರು, ಭೂಮಾಪನ, ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ. | ಕಂದಾಯ ಸದಸ್ಯರು |
| 5 | ಶ್ರೀಮತಿ ಹಫ್ಸಿಬಾರಾಣಿ ಕೊರ್ಲಾಪಾಟಿ, ಭಾ.ಆ.ಸೇ.,<br>ವಿಶೇಷ ಜಿಲ್ಲಾಧಿಕಾರಿಗಳು-I, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು. | ಕಂದಾಯ ಸದಸ್ಯರು |

<u>ಸದರಿ ನೇಮಕಾತಿಯು ಕೆಳಕಂಡ ಷರತ್ತುಗಳಿಗೆ ಒಳಪಟ್ಟಿದೆ :-</u>

(1) ಸದರಿ ವಿಶೇಷ ನ್ಯಾಯಾಲಯದ ಕೇಂದ್ರಸ್ಥಾನ ಬೆಂಗಳೂರು ಆಗಿರುತ್ತದೆ. ಹಾಗೂ ಅದರ ಕ್ಷೇತ್ರ ವ್ಯಾಪ್ತಿಯು ರಾಜ್ಯಾದ್ಯಂತ ಒಳಗೊಂಡಿರುತ್ತದೆ.

(2) ವಿಶೇಷ ನ್ಯಾಯಾಲಯದ ಅಧ್ಯಕ್ಷರು ಹಾಗೂ ಇತರೆ ಸದಸ್ಯರು ಪದಧಾರಣ ಮಾಡಿದ ದಿನಾಂಕದಿಂದ 3 ವರ್ಷಗಳ ಅವಧಿಯವರೆಗೆ ಅಥವಾ ವಿಶೇಷ ನ್ಯಾಯಾಲಯವು ಪುನರ್ ರಚನೆಯಾಗುವವರೆಗೆ ಇವುಗಳಲ್ಲಿ ಯಾವುದು ತರುವಾಯದ್ದೋ ಆವರೆಗೆ ಹಾಗೆ ಅಂಥ ಪದವನ್ನು ಅವರು ಧಾರಣ ಮಾಡತಕ್ಕದ್ದು.

(3) ವಿಶೇಷ ನ್ಯಾಯಾಲಯದ ಅಧ್ಯಕ್ಷರು ಮತ್ತು ಸದಸ್ಯರುಗಳ ವೇತನ ಭತ್ಯೆ ಇತ್ಯಾದಿಗಳನ್ನು ಪಾವತಿಸುವ ಕುರಿತು ಪ್ರತ್ಯೇಕ ಆದೇಶವನ್ನು ಹೊರಡಿಸಲಾಗುವುದು.

(4) ವಿಶೇಷ ನ್ಯಾಯಾಲಯದ ಅಧ್ಯಕ್ಷರ ಆಡಳಿತಾಧಿಕಾರಗಳನ್ನು ಅಧ್ಯಕ್ಷರೊಡನೆ ಸಮಾಲೋಚಿಸಿದ ತರುವಾಯ ಪ್ರತ್ಯೇಕವಾಗಿ ಆದೇಶ ಹೊರಡಿಸಲಾಗುವುದು.

(5) ವಿಶೇಷ ನ್ಯಾಯಾಲಯವು ತನ್ನ ಪ್ರಕಾರ್ಯಗಳನ್ನು ನೆರವೇರಿಸಲು ಸಹಾಯಕವಾಗುವಂತೆ ಬೇಕಾಗುವ ಅಧಿಕಾರಿ ಮತ್ತು ಇತರೆ ಸಿಬ್ಬಂದಿ ಪ್ರವರ್ಗಗಳು, ಅವರ ಸಂಬಳಗಳು, ಭತ್ಯೆಗಳು, ನೇಮಕಾತಿ ವಿಧಾನ ಮತ್ತು ಇತರ ಸೇವಾ ಷರತ್ತುಗಳ ಕುರಿತಂತೆ ವಿಶೇಷ ನ್ಯಾಯಾಲಯದ ಅಧ್ಯಕ್ಷರೊಡನೆ ಸಮಾಲೋಚಿಸಿ ಪ್ರತ್ಯೇಕವಾಗಿ ಆದೇಶ ಹೊರಡಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

22.3.16

(ಎಸ್.ಎಲ್.ಮಹಾಂತೇಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂ ಮಂಜೂರಾತಿ-1).

**ಇವರಿಗೆ,**

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು (ಇದನ್ನು ರಾಜ್ಯ ಪತ್ರದ ಮುಂದಿನ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಿ 100 ಪ್ರತಿಯನ್ನು ಕಂದಾಯ ಇಲಾಖೆಗೆ ಕಳುಹಿಸಲು ಕೋರಲಾಗಿದೆ.)

**ಇವರಿಗೆ:**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮುಖ್ಯ ನ್ಯಾಯಾಧೀಶರು, ಕರ್ನಾಟಕ ಉಚ್ಚ ನ್ಯಾಯಾಲಯ
3. ವಿಶೇಷ ನ್ಯಾಯಾಲಯದ ಅಧ್ಯಕ್ಷರು ಮತ್ತು ಸದಸ್ಯರುಗಳು
3. ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ,
4. ಅಡ್ವೋಕೇಟ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ,

(2–4) ಪತ್ರದ ಮುಖೇನ

5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
6. ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ.
7. ರಾಜ್ಯದ ಎಲ್ಲಾ ಪ್ರಾದೇಶಿಕ ಆಯುಕ್ತರು.
8. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು.
9. ರಾಜ್ಯದ ಎಲ್ಲಾ ಉಪ ವಿಭಾಗಾಧಿಕಾರಿಗಳು/ಎಲ್ಲಾ ತಹಶೀಲ್ದಾರ್‌ಗಳು (ಜಿಲ್ಲಾಧಿಕಾರಿಗಳ ಮೂಲಕ)
10. ಹೆಚ್ಚುವರಿ ಪ್ರತಿಗಳು/ಶಾಖಾ ರಕ್ಷಾ ಕಡತ.

**ಪ್ರತಿ:**

1. ಮಾನ್ಯ ಮುಖ್ಯ ಮಂತ್ರಿಯವರ ಆಪ್ತ ಕಾರ್ಯದರ್ಶಿಯವರು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.
2. ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿಯವರು, ವಿಧಾನಸೌಧ, ಬೆಂಗಳೂರು.
3. ಮಾನ್ಯ ಕಾನೂನು ಸಚಿವರ ಆಪ್ತ ಕಾರ್ಯದರ್ಶಿಯವರು, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಯವರು, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಯವರು, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
6. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಯವರು, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ), ಬಹುಮಹಡಿ ಕಟ್ಟಡ, ಬೆಂಗಳೂರು.
7. ಸರ್ಕಾರದ ಅಪರ/ಜಂಟಿ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಕಂದಾಯ ಇಲಾಖೆ. ಬಹುಮಹಡಿ ಕಟ್ಟಡ, ಬೆಂಗಳೂರು.
8. ಸರ್ಕಾರದ ಎಲ್ಲಾ ಅಧೀನ ಕಾರ್ಯದರ್ಶಿಗಳು.(ಭೂಮಂಜೂರಾತಿ-1/2/3), ಕಂದಾಯ ಇಲಾಖೆ. ಬಹುಮಹಡಿ ಕಟ್ಟಡ, ಬೆಂಗಳೂರು.